ಇವರುಗಳ ಮೇಲೆ ದಾವೆಗಳನ್ನು ಹೂಡಿರುತ್ತದದೆ ಅಲ್ಲದೇ ಶ್ರೀ ಅಣ್ಣೇಗೌಡ ಮತ್ತು ಶ್ರೀ ಬಿ.ಎನ್. ಜಗನ್ನಾಥ್ ಇವರ ಹೆಸರುಗಳಲ್ಲಿರುವ ಹಾಗೂ ಇವರ ಕುಟುಂಬದ ಸದಸ್ಯರ ಹೆಸರುಗಳಲ್ಲಿರುವ ಆಸ್ತಿಗಳನ್ನು ಅವರು ಪರಭಾರೆ ಮಾಡುವುದನ್ನು ನಿಷೇಧಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103ರ ರೀತ್ಯಾ ಬ್ಯಾಂಕು ತೀರ್ಪು ಮುನ್ನ ಜಪ್ತು ಮಾಡಿರುತ್ತದೆ. (ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್)

ಮೇಲ್ಕಂಡ ಹಣ ದುರುಪಯೋಗ ಕುರಿತಂತೆ ಪ್ರಕರಣವನ್ನು ಸಿ.ಓ.ಡಿ.ಗೆ ತನಿಖೆಗೆ ಒಪ್ಪಿಸಲಾಗಿದೆ. ಸಿ.ಓ.ಡಿ. ಅಧಿಕಾರಿಗಳು ತನಿಖೆಯನ್ನು ನಡೆಸುತ್ತಿದ್ದಾರೆ. ಇದಲ್ಲದೆ ಸಹಕಾರ ಸಂಘಗಳ ನಿಬಂಧಕರವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಪ್ರಕಾರ ವಿಚಾರಣೆಗೆ ನಡೆಸಲು ಮತ್ತು ಈ ದುರುಪಯೋಗ ಪ್ರಕರಣಕ್ಕೆ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗಧಿಗೊಳಿಸಲು ತನಿಖೆಯನ್ನುಆದೇಶಿಸಿ ತನಿಖಾಧಿಕಾರಿಗಳನ್ನು ನೇಮಿಸಿರುತ್ತಾರೆ. ತನಿಖೆಯು ವಿಚಾರಣಾ ಹಂತದಲ್ಲಿರುತ್ತದೆ.

ಚಿಕ್ಕಮಂಗಳೂರು ಜಿಲ್ಲಾ ಪರಿಷತ್ತಿನವರಿಂದ ಮೈಸೂರು ಲ್ಯಾಪ್ಸ್‌ಗಳನ್ನು ನಿಗದಿತ ಕಂಟ್ರಾಕ್ಟರ್ ನಿಂದ ಪಡೆಯಲು ಆದೇಶ

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಭಾಧ್ಯಕ್ಷಣೆಯವರೆ, ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನವರು ಎಲ್ಲಾ ಮಂಡಲ ಪಂಚಾಯಿತಿ ಮೈಸೂರು ಲ್ಯಾಂಪ್ಸ್, ಬಲ್ಬ್ ಹಾಗೂ ಟ್ಯೂಬ್‌ಗಳನ್ನೇ ನಿಗದಿತ ಕಂಟ್ರಾಕ್ಟರ್ ಒಬ್ಬರಿಂದಲೇ ಪಡೆಯಬೇಕೆಂಬ ಆದೇಶ ಅರ್ಥವಾಗುತ್ತಿಲ್ಲ. ಕಾರಣ ಪ್ರತಿ ಹಳ್ಳಿಗಳಲ್ಲೂ ಬಲ್ಬ್ ಹಾಕಿದ ಒಂದೇ ತಿಂಗಳಲ್ಲಿ ಕೆಟ್ಟುಹೋಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಒಳ್ಳೆಯ ಬಾಳಿಕೆ ಬರುವಂಥ ಬಲ್ಬುಗಳನ್ನು ಕೊಳ್ಳಲು ಜಿಲ್ಲಾಪರಿಷತ್ತು ಒಪ್ಪುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಸಮಸ್ಯೆ ಪ್ರತಿ ನನ್ನ ತಾಲ್ಲೂಕಿನ ಹಳ್ಳಿಗಳಲ್ಲೂ ಇರುತ್ತದೆ. ಈ ಬಗ್ಗೆ ಕೂಡಲೇ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ): ಮಾನ್ಯ ಸಭಾದ್ಯಕ್ಷಣೆಯವರೇ, ಮಾನ್ಯ ಸದಸ್ಯಣೆಯವರು ಸದನದಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಹೆಣ್ಣೂರು-ಬಾಣಸವಾಡಿ ಬಿ.ಡಿ.ಎ. ಬಡಾವಣೆಗೆ ಕಪ್ಪು ಹಲಗೆಯ ಬಸ್ ಓಡಿಸಲು ಒತ್ತಾಯ

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಸಭಾಧ್ಯಕ್ಷಣೆಯವರೇ, ನಗರ ಸಭೆಯ ವ್ಯಾಪ್ತಿಗೆ ಸೇರದ ಇತರ ಬಿ.ಡಿ.ಎ. ಬಡಾವಣೆಗಳಿಗೆ ನಗರ ಸಾರಿಗೆ ಕಪ್ಪು ಹಲಗೆಯ (ಬ್ಲಾಕ್ ಬೋರ್ಡ್) ಬಸ್ಸುಗಳನ್ನು (ಚಂದ್ರಾ ಬಡಾವಣೆ, ಗಿರಿನಗರ, ಪದ್ಮನಾಭನಗರ, ಕತ್ತರಿಗುಪ್ಪೆ, ಬಿ.ಟಿ.ಎಂ. ಬಡಾವಣೆ, ಕೋರಮಂಗಲ ಇತ್ಯಾದಿ) ಓಡಿಸುತ್ತಿರುವ ಹಾಗೆ ಹೆಣ್ಣೂರು-ಬಾಣಸವಾಡಿ (ಈಗ ಕಲ್ಯಾಣ ನಗರ) ಬಿ.ಡಿ.ಎ. ಬಡಾವಣೆಗೆ ನಗರ ಸಾರಿಗೆ ಕಪ್ಪು ಹಲಗೆ ಬಸ್ಸುಗಳನ್ನು ಓಡಿಸದೆ ಗ್ರಮಾಂತರ ಕೆಂಪು ಹಲಗೆ (ರೆಡ್ ಬೋರ್ಡ್) ಬಸ್ಸುಗಳನ್ನು ಓಡಿಸುತ್ತಿರುವುದರಿಂದ ಈ ಬಡಾವಣೆಯ ನಾಗರೀಕರಿಗೆ ಆಗಿರುವ ತಾರತಮ್ಯ ಮತ್ತು ಅನ್ಯಾಯದ